ಓಎಸ್. 296/2020 ಡಿಡಬ್ಲ್ಯೂ:1

ದಿನಾಂಕಃ 11.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎ ಎಸ್ ಎಸ್ ಆರ್ ವಕೀಲರಿಂದಃ

ನಾನು ಯಾವುದೇ ವಿದ್ಯಾಭ್ಯಾಸ ಮಾಡದ ಕಾರಣ ಓದಲು ಬರೆಯಲು ಬರುವುದಿಲ್ಲ. ನಿಡಿ 3 ಅಸ್ಸೆಸ್ಮೆಂಟ್ ರಿಜಿಸ್ಟರ್ 2010-11 ರ ಸಾಲಿನದಾಗಿದ್ದು ಇತ್ತೀಚಿನ ಅಸ್ಸೆಸ್ಮೆಂಟ್ ರಿಜಿಸ್ಟರ್ ಹಾಜರು ಪಡಿಸಿಲ್ಲ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿ ಇ-ಸ್ವತ್ತು ಖಾತೆ ಮಾಡಿಸಿರುವುದಿಲ್ಲ. ನನ್ನ ತಾಯಿ ರುದ್ರಮ್ಮ ಸದರಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಆಸ್ತಿಯ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಖರೀದಿ ಪತ್ರವು ನನ್ನ ಅಣ್ಣ ಸುಬ್ಬಶೆಟ್ಟಿಯ ಬಳಿ ಇರುತ್ತದೆ. ಆದ್ದರಿಂದ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಕಂದಾಯ ಪಾವತಿಸಿದ ಕುರಿತು ಇತ್ತೀಚಿನ ರಶೀದಿಗಳನ್ನು ಹಾಜರು ಪಡಿಸಿರುತ್ತೇನೆ. ನನ್ನ ತಾಯಿ ನನ್ನ ಅಣ್ಣ ಸುಬ್ಬಶೆಟ್ಟಿಗೆ ಮತ್ತು ನನಗೆ ವಿಭಾಗ ಮಾಡಿ ಆಸ್ತಿಯನ್ನು ನೀಡಿರುತ್ತಾರೆ. ಸದರಿ ವಿಭಾಗ ಪತ್ರ ಕೂಡ ನನ್ನ ಅಣ್ಣ ಸುಬ್ಬಶೆಟ್ಟಿಯ ಬಳಿ ಇರುತ್ತದೆ. ಈಗ್ಗೆ 8 ವರ್ಷದ ಹಿಂದೆ ನನ್ನ ಅಣ್ಣ ಸುಬ್ಬಶೆಟ್ಟಿ ಮೃತರಾಗಿರುತ್ತಾರೆ. 2011 ರಿಂದ ದಾಖಲೆಗಳು ನನ್ನ ಹೆಸರಿನಲ್ಲಿ ವರ್ಗಾವಣೆಯಾಗಿರುತ್ತವೆ.

ನಿಡಿ 10 ರಲ್ಲಿ ರುದ್ರಮ್ಮರವರ ಹೆಸರು ನಮೂದಾಗಿದೆ ಎಂದರೆ ಸರಿ. ನಿಡಿ 11 ರಿಂದ 13 ರಲ್ಲಿ ಯಾವ ಮನೆಗೆ ಸಂಬಂದಿಸಿದ ವಿದ್ಯುತ್ ಸಂಪರ್ಕದ ಬಿಲ್ ಎಂದು ಬರೆದಿಲ್ಲ ಎಂದರೆ ಸಾಕ್ಷಿ ನಾವು ವಾಸವಿರುವ ಮನೆಯ ವಿದ್ಯುತ್ ಶುಲ್ಕ ಪಾವತಿಯ ಬಿಲ್ ಗಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ವಾದಿಗೆ ಬಿಟ್ಟು ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರತಿಪಾದನೆ ಮಾಡಿ, ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.